ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Saturday, the 3rd May 1980/Vaishaka 13, 1902 S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

OBITUARY REFERENCE

MR. SPEAKER.—With profound regret I annouce the demise of Sri K. H. Siddaramappa, a sitting Member of this House from Holalkere Constituency, in the early hours of the morning. Sri Siddaramappa was born on 14th October 1920 at Holalkere, He was an agriculturist by profession. He took part in several social and political activities. He was president of the Town Municipal Council, Holalkere. He served in the Land Tribunal at Holalkere and was President of the District Yadav Sangh, Chitradurga. He was very much interested in the upliftment of downtrodden, Harijans, Backward Classes and Minorities.

I am sure the House will join me in expressing our sincere condolences to the Members of the bereaved family.

ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಶಾಸನ ಸಭೆಯ ಸದಸ್ಯರಾದ ಶ್ರೀಮಾನ್ ಸಿದ್ದರಾಮಪ್ಪನವರು ಈ ದಿನ ಬೆಳಿಗಿನ ಝಾವ ಎರಡೂವರೆ ಗಂಟೆಗೆ ಆಕಸ್ಮಿಕವಾಗಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರು ಹೊಳಲ್ಕೆರೆ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದು, ಬಹು ಹಿಂದುಳಿದ ಜನಾಂಗದವರಾಗಿದ್ದು, ಸರಳ ಜೀವಿಗಳಾಗಿದ್ದರು. ಅವರು ತಮ್ಮ ಕರ್ತವ್ಯ, ತಮ್ಮ ಕ್ಷೇತ್ರದ ಕೆಲಸ ಇಷ್ಟನ್ನು ಬಿಟ್ಟರೆ, ಬೇರೆ ವಿಚಾರಗಳಲ್ಲಿ ಅವರಿಗೆ ಹೆಚ್ಚಿನ ಆಸಕ್ತಿ ಇರಲಿಲ್ಲ. ಅವರು ಹೊಳಲ್ಕೆರೆಯ ಕ್ಷೇತ್ರದಲ್ಲಿ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಅಲ್ಲದೆ ಅವರು ಪುರಸಭೆಯ ಅಧ್ಯಕ್ಷರಾಗಿ ಅನೇಕ ವರ್ಷಗಳ ಕಾಲ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಅಲ್ಪಸಂಖ್ಯಾತ ವರ್ಗಕ್ಕೆ, ಹಿಂದುಳಿದ ವರ್ಗಕ್ಕೆ ಸೇರಿದಂತವರಿಗೆ ಇವರು ಪೌರಸಭೆಯಲ್ಲಿದ್ದು ಕೆಲಸ ಮಾಡಿರುವುದನ್ನು ನೋಡಿದರೆ ಆ ಕ್ಷೇತ್ರದಲ್ಲಿ ಇವರು ಎಷ್ಟು ಗೌರವವನ್ನು ಬೆಳೆಸಿಕೊಂಡಿದ್ದರು, ಅವರು ಎಷ್ಟು ಬಡವರ ಸೇವೆ ಮಾಡಿದ್ದರು ಎನ್ನುವುದನ್ನು ನೋಡಬಹುದು. ಈ ಸಾರಿ ನಡೆದಂಥ ಚುನಾವಣೆಯಲ್ಲಿ ಅವರ ವಿರುದ್ಧ ಸ್ಪರ್ಧೆ ಮಾಡಿದಂತಹವರು ಬಹಳ ಹೆಚ್ಚಿನ ಪ್ರಭಾವಯುತ ವ್ಯಕ್ತಿಗಳಾಗಿದ್ದರೂ ಸಹ ಸಿದ್ಧರಾಮಪ್ಪನವರು ಅತ್ಯಂತ ಹೆಚ್ಚಿನ ಬಹುಮತದಿಂದ ಆ ಕ್ಷೇತ್ರದಿಂದ ಆಯ್ಕೆಯಾಗಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ನೆನ್ನೆಯ ದಿವಸ ಅವರು ವಿಧಾನಸಭೆಗೆ ಬಂದಿದ್ದು, ಪಾರ್ಟಿ ಸಭೆಯಲ್ಲಿ ಕೊನೆಯವರೆಗೂ ಇದ್ದು ಆಲ್ಲಿ ಅವರು ಊಟ ಮಾಡಿದ್ದರು. ರಾತ್ರಿ ಈ ರೀತಿಯಾಗಿದೆ. ಈಗ ನಾವು ಅವರ ಆತ್ಮಕ್ಕೆ ಶಾಂತಿ ಕೋರುವುದರ ಜೊತೆಗೆ ಅವರ ಕುಟುಂಬದವರಿಗೆ ಆಗಿರತಕ್ಕ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಪ್ರಾರ್ಥಿಸಿ ಅವರ ಸೇವೆಯ ನೆನಪಿಗಾಗಿ ಮತ್ತು ಈ ಶಾಸನಸಭೆಯ ಸದಸ್ಯರಾಗಿ ಸಲ್ಲಿಸಿದ ಸೇವೆಗೋಸ್ಕರ ಈ ದಿನ ಸಭೆಯನ್ನು ಅಡ್ಜರ್ನ್ ಮಾಡುವ ಮೂಲಕ ಗೌರವ ಸೂಚಿಸಬೇಕೆಂದು ಕೋರುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸನ್ಮಾನ್ಯ ಅಧ್ಯಕ್ಷರೇ, ನೆನ್ನೆ ರಾತ್ರಿ ಅವರಿಗೆ ಈ ರೀತಿ ತೊಂದರೆಯಾಗಿದೆ ಎಂದು ಕೇಳಿದ ಸ್ವಲ್ಪ ಹೊತ್ತಿನಲ್ಲಿಯೇ ಅವರು ತೀರಿಕೊಂಡರು ಎಂದು ತಿಳಿಯಿತು. ಅವರು ಹಿಂದುಳಿದ ವರ್ಗದ ಸಮಾಜ ಸೇವಕರಾಗಿದ್ದರು. ಆ ಭಾಗದ ಜನರು ಒಬ್ಬ ಒಳ್ಳೆಯ ಸೇವಕನನ್ನು ಕಳೆದುಕೊಂಡಂತಾಗಿದೆ. ಅವರು ತಮ್ಮ ಕರ್ತವ್ಯವನ್ನು ಉತ್ತಮ ರೀತಿಯಲ್ಲಿ ಮಾಡಿಕೊಂಡು ಬಂದಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಕ್ಕಲೆಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ, ಮುಖ್ಯ ಮಂತ್ರಿಗಳು ವ್ಯಕ್ತಪಡಿಸಿದ ಭಾವನೆಗಳಲ್ಲಿ ನಾನು ಭಾಗಿಯಾಗಿದ್ದೇನೆ.

ಶ್ರೀ ಸಿ. ಎಂ ಇಬ್ರಾಹಿಂ (ಕಾರ್ಮಿಕ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಸಿದ್ಧರಾಮಪ್ಪನವರ ನಿಧನದ ಸುದ್ದಿಯನ್ನು ಕೇಳಿ ನನಗೆ ದೊಡ್ಡ ಆಘಾತವಾಯಿತು. ಅವರು ರೈತ ವರ್ಗದ ಏಳಿಗೆಯ ಬಗ್ಗೆ ಒಳ್ಳೆಯ ಅಭಿಮಾನವನ್ನು ಇಟ್ಟಿದ್ದರು. ರೈತರಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ, ಕ್ವಿಂಟೋಲ್‌ಗೆ ೯೫ ರೂಪಾಯಿನಂತೆ ರೈತರಿಗೆ ಕೊಡಿಸಬೇಕೆಂದು ಸುಮಾರು ೩–೪ ಸಾವಿರ ಕ್ವಿಂಟೋಲ್ ರಾಗಿಯನ್ನು ಹೊಳಲ್ಕೆರೆಯಲ್ಲಿ ಕಾರ್ಪೊರೇಷನ್‌ರವರು ಪರ್ಚೇಸ್ ಮಾಡುವಂತೆ ರಾತ್ರೋ ರಾತ್ರಿ ಪಟ್ಟು ಹಿಡಿದು ಸ್ವಲ್ಪ ದಿವಸಗಳ ಹಿಂದೆ ಮಾಡಿಸಿದ್ದರು. ಅಂತಹವರು ಇವೊತ್ತು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಭಗವಂತನು ಅವರ ಆತ್ಮಕ್ಕೆ ಶಾಂತಿ ಕೊಡಲಿ ಎಂದು ಪ್ರಾರ್ಥಿಸಿ ಅವರ ಕುಟುಂಬ ವರ್ಗದವರಿಗೆ ಆಗಿರತಕ್ಕ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

MR. SPEAKER.—I request the hon. Members to stand in silence for a minute as a mark of respect to the deceased.

(*The House stood in silence for a minute as a mark of respect to the memory of the deceased.*)

MR. SPEAKER,—The House now stands adjourned to meet again on Monday, at 9-00 A.M.

The House adjourned at Fifteen minutes past Nine of the Clock to meet again at Nine of the Clock on Monday, the 5th May, 1980.